ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ :ಕಾಶಿಇ/ಶೈವಿ/218/ಸ್ಕೌಟ್ಸ್&ಗೈಡ್ಸ್/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ: 01-10-2022

**ಅಧಿಕೃತ ಜ್ಞಾಪನ**

**ವಿಷಯ** : ಅಂತರರಾಷ್ಟ್ರೀಯ ಸಾಂಸ್ಕೃತಿಕ ಸ್ಕೌಟ್ಸ್-ಗೈಡ್ಸ್ ಜಾಂಬೂರಿಯಲ್ಲಿ ಭಾಗವಹಿಸಲು ರೋವರ್ಸ್ ಮತ್ತು ರೇಂಜರ್ಸ್ ಘಟಕವಿರುವ ಪದವಿ ಕಲೇಜುಗಳ ರೋವರ್ಸ್-ರೇಂಜರ್ಸ್‌ಗಳನ್ನು ದಿನಾಂಕ:21.12.2022 ರಿಂದ 27.12.2022 ರವರೆಗೆ ನಿಯೋಜಿಸಲು ಅನುಮತಿ ಕೋರಿರುವ ಬಗ್ಗೆ.

**ಉಲ್ಲೇಖ:** ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ :ಬಿ.ಎಸ್.ಜಿ/ಎಸ್.ಹೆಚ್‌ಕ್ಯೂ/1185/2022-23, ದಿನಾಂಕ: 23.08.2022.

*****

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯದ ಸಂಸ್ಥೆಯಿಂದ ವಿಶ್ವದಲ್ಲಿಯೇ ಪ್ರಥಮ ಬಾರಿಗೆ ಆಯೋಜನೆಗೊಳ್ಳುತ್ತಿರುವ **"ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ"**ಯು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯ ವಿದ್ಯಾಗಿರಿಯಲ್ಲಿ 7 ದಿನಗಳ ಕಾಲ 2022ರ ಡಿಸೆಂಬರ್ ಮಾಹೆಯ 21 ರಿಂದ 27 ರವರೆಗೆ ಏರ್ಪಡಿಸಲಾಗಿದೆ. ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಜಾಂಬೋರಿಯಲ್ಲಿ ಮಕ್ಕಳ ವ್ಯಕ್ತಿ ವಿಕಾಸ, ಪ್ರತಿಭಾ ಪ್ರದರ್ಶನ, ಕೌಶಲ್ಯ ಪ್ರದರ್ಶನಕ್ಕೆ ಅವಕಾಶವಿದೆ. ಸ್ಕೌಟ್ಸ್ /ಗೈಡ್ಸ್ ತರಬೇತಿ ಪಡೆದ ಅಧ್ಯಾಪಕರು ಈ ಚಟುವಟಿಕೆಗಳನ್ನು ನಿರ್ವಹಿಸಲಿದ್ದಾರೆ.

ಮುಂದುವರೆದು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿ-ವಿದ್ಯಾರ್ಥಿನಿ ಒಬ್ಬರಿಗೆ ಊಟ, ವಸತಿ, ಚಟುವಟಿಕೆಗಳ ಬಗ್ಗೆ ಶಿಬಿರ ಶುಲ್ಕ ರೂ-1,500/- ಪಾವತಿಸಬೇಕಾಗಿರುತ್ತದೆ ಹಾಗೂ ಪ್ರಯಾಣ ವೆಚ್ಚವನ್ನು ಆಯಾ ಪದವಿ ಕಾಲೇಜುಗಳಲ್ಲಿ ಚಾಲ್ತಿ ರೋವರ್ಸ್-ರೇಂಜರ್ಸ್ ನಿಧಿ ಭರಿಸಬೇಕಾಗಿರುತ್ತದೆ. ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು/ ಅಧ್ಯಾಪಕರುಗಳು ಸ್ವಂತ ಸ್ಥಳದಿಂದ ಹೋಗಿ-ಬರಲು ಪ್ರಯಾಣ ವೆಚ್ಚವನ್ನು ಭರಿಸಲು ಕಾಲೇಜಿನ ರೋವರ್ಸ್-ರೇಂಜರ್ಸ್ ಸಂಚಿತ ನಿಧಿಯಿಂದ ಹಣವನ್ನು ಭರಿಸಲು ಪ್ರಾಂಶುಪಾಲರಿಗೆ ಅನುಮತಿ ಆದೇಶ ನೀಡಲು ಕೋರಿರುತ್ತಾರೆ.

ಮುಂದುವರೆದು ಕಳೆದ ಎರಡು ವರ್ಷಗಳಿಂದ ಕೋವಿಡ್ ಹಿನ್ನಲೆಯಲ್ಲಿ ಕಾಲೇಜಿನಲ್ಲಿ ರೋವರ್ಸ್-ರೇಂಜರ್ಸ್ ಯಾವುದೇ ಚಟುವಟಿಕೆಗಳು ನಡೆಯದಿರುವ ಕಾರಣ ಸದರಿ ಸಾಲುಗಳಲ್ಲಿ ಸಂಗ್ರಹವಾಗಿರುವ (ರೋವರ್ಸ್-ರೇಂಜರ್ಸ್) ಶುಲ್ಕ ಹಾಗೂ ಸದರಿ ಸಾಲಿನ ರೋವರ್ಸ್-ರೇಂಜರ್ಸ್ ಶುಲ್ಕಗಳನ್ನು, ಮಾರ್ಗಸೂಚಿಗಳನ್ನು ಅನುಸರಿಸಿ ಈ ಕಾರ್ಯಕ್ರಮಕ್ಕೆ ಖರ್ಚು ಮಾಡಲು ಅನುಮತಿ ನೀಡಲಾಗಿದೆ.

ಭಾಗವಹಿಸುವ ವಿದ್ಯಾರ್ಥಿಗಳ/ಅಧ್ಯಾಪಕರ ನೊಂದಣಿಯನ್ನು October 20ರ ಒಳಗೆ ನೊಂದಾಯಿಸಿ ನಂತರ ಈ ಕಛೇರಿಯ e-mail ID dcekar.sports @gamil.com ಗೆ ಪಟ್ಟಿ ಕಳುಹಿಸಿ ವಿದ್ಯಾರ್ಥಿಗಳಗೆ ಅನುಮತಿ/ಅಧ್ಯಾಪಕರಿಗೆ OOD ಸೌಲಭ್ಯ ಪಡೆಯ ಬಹುದಾಗಿರುತ್ತದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟಿದೆ)**

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಕಲಬುರಗಿ, ಮತ್ತು ಧಾರವಾಡ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸಂಬಂಧಿಸಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ರೋವರ್ಸ್-ರೇಂಜರ್ಸ್ ಲೀಡರ್‌ಗಳಿಗೆ -ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.

ಪ್ರತಿಯನ್ನು:

1. ರಾಜ್ಯ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು - 560001.
2. ಶ್ರೀ ಆರ್. ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು.
3. ಕಛೇರಿ ಪ್ರತಿ.